# ಬರಿದಾಗುತ್ತಿರುವ ಅಂತರ್ಜಲ

ಸಂಸ್ಕೃತದಲ್ಲಿ ಸೂರ್ಯನಿಗಿರುವ ಹಲವು ಹೆಸರುಗಳಲ್ಲಿ 'ಚಂಡಕಿರಣ' ಎಂಬುದೂ ಒಂದು. ಸೂರ್ಯನೆಂಬ ತೇಜೋಗೋಲ ತನ್ನ ಕಿರಣಗಳ ಮೂಲಕ ಅತ್ಯಂತ ತೀಕ್ಷ್ಣ ತಾಪವನ್ನು ಹೊರಹಾಕುವ ಕಾರಣಕ್ಕಾಗಿಯೇ ಸೂರ್ಯನಿಗೆ ಈ ಹೆಸರು. ಸೂರ್ಯನ ತೀವ್ರ ಜ್ವಲನ ಶಕ್ತಿಯ ಪ್ರಭಾವ ಸ್ಪಷ್ಟವಾಗಿ ಭೂಮಿಯ ಮೇಲೆ ಕಾಣಿಸಿಕೊಳ್ಳುತ್ತಿರುವುದು ಇತ್ತೀಚಿನ ದಿನಗಳಲ್ಲಿ ನಮ್ಮೆಲ್ಲರ ಅನುಭವಕ್ಕೆ ಬರುತ್ತಿದೆ. ವರ್ಷದಿಂದ ವರ್ಷಕ್ಕೆ ಜಾಗತಿಕ ತಾಪಮಾನ ಹೆಚ್ಚುತ್ತಿದೆ ಎಂಬ ಎಚ್ಚರಿಕೆಯನ್ನು ವಿಜ್ಞಾನಿಗಳು ಕೊಡುತ್ತಲೇ ಇದ್ದಾರೆ. ಏರುತ್ತಿರುವ ತಾಪಮಾನದ ಪರಿಣಾಮವಾಗಿ ಭೂಮಿಯ ಮೇಲಿನ ಸಸ್ಯಸಂಕುಲ, ಪ್ರಾಣಿ ಪಕ್ಷಿ ಸಂಕುಲಗಳು ಬಸವಳಿಯುವ ಹಂತದಲ್ಲಿವೆ. ನಮ್ಮನ್ನು 'ಚಂಡಕಿರಣ'ನ ಪ್ರತಾಪದಿಂದ ರಕ್ಷಿಸುವ ಕವಚವಾಗಿರುವ ಓಜೋನ್ ಪದರ ಛಿದ್ರಗೊಳ್ಳುತ್ತಿದೆ ಎನ್ನುತ್ತಿದ್ದಾರೆ ವಿಜ್ಞಾನಿಗಳು. ಜೊತೆಗೆ ಭೂಮಿಯ ಒಳಪದರದಲ್ಲಿನ ಅಂತರ್ಜಲದ ಪ್ರಮಾಣ ಕಡಿಮೆಯಾಗುತ್ತಿದೆ. ಹೀಗಾಗಿ ನೀಲಿ ಬಾನು ಶ್ಯಾಮಲ ಪೃಥ್ವಿಗಳ ಆಶ್ರಯದಲ್ಲಿ ನಿರಾತಂಕವಾಗಿ ಬದುಕುತ್ತಿದ್ದ ಜೀವಸಂಕುಲ ಸಹಜವಾಗಿಯೇ ಆತಂಕಕ್ಕೆ ಒಳಗಾಗಿದೆ. ಇಷ್ಟಾದರೂ ಮನುಷ್ಯ ಅವಿವೇಕಿಯಾಗಿ ಹತ್ತು ಹಲವು ರೀತಿಯಲ್ಲಿ ಪರಿಸರಕ್ಕೆ ಹಾನಿಯುಂಟು ಮಾಡುತ್ತಲೇ ಇದ್ದಾನೆ. ಗಣಿಗಾರಿಕೆ, ಕೆರೆಗಳ ನಾಶ, ಅರಣ್ಯ ಹನನ, ವಾಹನಗಳಿಂದ ಹಾಗೂ ಕಾರ್ಖಾನೆಗಳಿಂದ ಮಾಲಿನ್ಯ– ಇಂಥ ಹಲವು ಮುಖಗಳಲ್ಲಿ ನಡೆದ ಮನುಷ್ಯನ ಚಟುವಟಿಕೆಯಿಂದ ಪರಿಸರದ ಸಮತೋಲನಕ್ಕೆ ಧಕ್ಕೆಯಾಗುತ್ತಲೇ ಇದೆ.

ಭೂಮಿಯ ಒಳಪದರದಲ್ಲಿ ಶೇಖರವಾಗುತ್ತಿರುವ ಜೀವ ಜಲದ ಒರತೆ ವರ್ಷದಿಂದ ವರ್ಷಕ್ಕೆ ಕುಗ್ಗುತ್ತಿರುವ ಪರಿಣಾಮವನ್ನು ಈ ದಿನಗಳಲ್ಲಿ ನಾವೆಲ್ಲ ಅನುಭವಿಸುತ್ತಿದ್ದೇವೆ. ಹಿಂದಿನ ವರ್ಷಗಳಲ್ಲಿ ಕೊಳವೆ ಬಾವಿಗಳಿಗಾಗಿ ಕೊರೆದಾಗ ಕೆಲವೇ ಅಡಿಗಳಲ್ಲಿ ಸಿಗುತ್ತಿದ್ದ ಸಮೃದ್ಧ ನೀರು ಈಗ ನೂರಾರು ಅಡಿಗಳಿಗಿಂತಲೂ ಕೆಳಕ್ಕಿಳಿದಿದೆ. ಮಳೆಯ ನೀರು ಭೂಮಿಯಲ್ಲಿ ಇಂಗದೇ ವ್ಯರ್ಥವಾಗುವಂಥ ವಾತಾವರಣ ನಿರ್ಮಾಣವಾಗಿರುವುದೇ ಅಂತರ್ಜಲದ ಅಭಾವಕ್ಕೆ ಕಾರಣವೆಂದು ಪರಿಸರ ತಜ್ಞರು ಹೇಳುತ್ತಲೇ ಇದ್ದಾರೆ.

ನೀರು ಎಂಬುದಕ್ಕೆ 'ಜೀವನ' ಎಂಬ ಪರ್ಯಾಯ ಪದವಿದೆ. ನೀರಿದ್ದರೆ ಜೀವನ, ನೀರಿಲ್ಲದಿದ್ದರೆ ಜೀವನವೂ ಇಲ್ಲ ಎಂಬ ಸತ್ಯವನ್ನು ಇದು ಧ್ವನಿಸುತ್ತದೆ. ಅರ್ಥಾತ್ ನೀರು ಮತ್ತು ಬದುಕು ಪರಸ್ಪರ ತಳುಕು ಹಾಕಿಕೊಂಡಿವೆ ಎನ್ನಬಹುದು. ಪ್ರಸ್ತುತ ಕಾಲ ಘಟ್ಟದಲ್ಲಿ ಭೌತಿಕ ಜಗತ್ತಿನಲ್ಲಿ ಮಾತ್ರವಲ್ಲ, ನಮ್ಮೆಲ್ಲರ ಒಳ ಜಗತ್ತಿನಲ್ಲೂ ಒಂದು ಬಗೆಯ 'ನಿರ್ಜಲೀಕರಣ ಪ್ರಕ್ರಿಯೆ' ನಡೆಯುತ್ತಿದೆ. 'ಅಮೃತವಾಹಿನಿಯೊಂದು ಹರಿಯುತಿದೆ ಮಾನವನ ಎದೆಯಿಂದ ಎದೆಗೆ...' ಎಂಬ ಕವಿಯ ಮಾತು ಗತಕಾಲದ ಸತ್ಯವೆನ್ನುವಂತಾಗಿದೆ. ಸಹನೆ, ಕರುಣೆ, ಸ್ನೇಹ, ಕ್ಷಮೆ, ವಾತ್ಸಲ್ಯ, ತ್ಯಾಗ, ಪ್ರಾಮಾಣಿಕತೆ– ಇಂಥ ಮೌಲಿಕ ಗುಣಗಳ ಅನುಪಸ್ಥಿತಿಯಲ್ಲಿ ಮನುಷ್ಯನ ಅಂತರಂಗ ತನ್ನ ಆರ್ದ್ರತೆಯನ್ನು ಕಳೆದುಕೊಂಡು ನಿರ್ಜಲೀಕರಣಕ್ಕೆ ಒಳಗಾಗುತ್ತಿದೆ. ಹೆಚ್ಚು ಹೆಚ್ಚು ಆತ್ಮ ಕೇಂದ್ರಿತ ಧೋರಣೆಯನ್ನು ಬೆಳೆಸಿಕೊಳ್ಳುತ್ತಿರುವ ಆಧುನಿಕ ಮನುಷ್ಯ ತನ್ನ ಸಹಜೀವಿಗಳ ಅಸ್ತಿತ್ವದ ಬಗೆಗೆ ವಿಮುಖನಾಗುತ್ತಿದ್ದಾನೆ. ಅವನಲ್ಲಿರಬೇಕಾದ ಅಂತರ್ಜಲದ ಒರತೆ ಒಣಗುತ್ತಿರುವುದರಿಂದಾಗಿ, ನೀರಿಲ್ಲದ ಮರುಭೂಮಿಯಲ್ಲಿ ಮುಳ್ಳುಕಂಟಿಗಳೇ ಬೆಳೆಯುವಂತೆ, ಅವನ ಹೃದಯದಲ್ಲಿ ವಿಕೃತಿಗಳೂ, ಮೃಗೀಯ ಪ್ರವೃತ್ತಿಗಳೂ ವಿಜೃಂಭಿಸುತ್ತಿವೆ. ಈ ಸಂದರ್ಭದಲ್ಲಿ ಕವಿ ಎಚ್.ಎಸ್. ವೆಂಕಟೇಶ ಮೂರ್ತಿಯವರ 'ನಿರ್ಗಮನ' ಎಂಬ ಕವಿತೆಯ ಕೆಲ ಸಾಲುಗಳು ನೆನಪಾಗುತ್ತವೆ. ಶ್ರೀರಾಮನ ನಿರ್ಗಮನದ ನಂತರದ ಅಯೋಧ್ಯೆಯನ್ನೂ, ಶ್ರೀಕೃಷ್ಣನ ನಿರ್ಗಮನದ ನಂತರದ ಬೃಂದಾವನವನ್ನೂ ಈ ಸಾಲುಗಳು ನಮ್ಮ ಮುಂದಿಡುತ್ತವೆ;

'ಅಯೋಧ್ಯೆ ಎಂಥೆಂಥವರೋ ಹಾಳು ಗೆಡಹಿದ  
ದುರ್ಭೇದ್ಯ ದಂಡಕ... ಅರಮನೆ ಪಾಳಲ್ಲಿ ಠಳಾಯಿಸು  
ತ್ತಿದ್ದವು ಕೆಂಗಣ್ಣ ಕಿರುಬ ಗಸ ಗಸ ಮಸೆಯುತ್ತ  
ನಖ ದಂಷ್ಟ್ರವನ್ನ. ಸರಯೂ ನದಿ ರಾಡಿ ಬಗ್ಗಡವಾಗಿ  
ಥೇ ಥೈಕ್ಕೆಯಾಡುತ್ತಿದ್ದವಲ್ಲಿ ಕಾಡೆಮ್ಮೆ ಕೊಬ್ಬಿದ ಕೋಣ...  
...ಬೃಂದಾವನದ ಚಿತ್ರ ಇನ್ನೂ ವಿಚಿತ್ರ. ಎಲೆ ಮನೆಗಳೆಲ್ಲಾ  
ಮುಗಿಲೆತ್ತರದ ಮಹಡಿ, ಕಾಡುಗಳ ಸವರಿ ನಾಡ ವಿಸ್ತರಣೆ  
ನಡೆದೇ ಇತ್ತು ಹಗಲೂ ಇರುಳು... ಶಕಟಾಸುರರು ಸರಿರಾತ್ರಿಯಲ್ಲೂ  
ನಿರಾತಂಕ ನುಗ್ಗುತ್ತಿದ್ದರು ರಸ್ತೆಯಿಂದೆಗರಿ ಪಾದ ಪಥವನೇರಿ...'  
ಇದು ನಮ್ಮ ಕಾಲದ ಚಿತ್ರಣವೇ ಅಲ್ಲವೇ?

■ ವೈನತೇಯ

## ಮಾತೇ ಮುತ್ತು

★ ಹಸಿವೆಯಿಂದ ನರಳುತ್ತಿರುವ ಜನಾಂಗಕ್ಕೆ ಧರ್ಮೋಪದೇಶ ಮಾಡುವುದು ಮಹಾ ನೀಚ ಕಾರ್ಯ. ಹಸಿದವನಿಗೆ ವೇದಾಂತ ಬೋಧಿಸುವುದು ಒಂದು ಅಧಮಾಧಮ ಪಾಪ.

–ಸ್ವಾಮಿ ವಿವೇಕಾನಂದ

★ ಇಂದು ಮಿತಿಮೀರಿದ ಆಸೆಯೇ ಜಗತ್ತಿನ ಜೀವನವನ್ನೆಲ್ಲ ರೂಪಿಸುತ್ತಿದೆ. ಸಾಸಿವೆಯಷ್ಟು ಸುಖಕ್ಕಾಗಿ ಸಾಗರದಷ್ಟು ದುಃಖವನ್ನು ಸಹಿಸಲು ಸಿದ್ಧವಾಗಿದೆ.

–ಸಿಂಪಿ ಲಿಂಗಣ್ಣ

★ ಭವಿಷ್ಯವನ್ನು ಎದುರಿಸುವ ಸುಲಭ ಮಾರ್ಗವೆಂದರೆ ವರ್ತಮಾನವನ್ನು ಸರಿಯಾಗಿ ನಿಭಾಯಿಸುವುದು. ಇದನ್ನು ಸರಿಯಾಗಿ ಎದುರಿಸದೆ ನಾಳೆಗಳನ್ನು ಕಟ್ಟಲಾಗುವುದಿಲ್ಲ. ಆದ್ದರಿಂದ ನಾಳೆಗಿಂತ ಇಂದಿನ ಬಗ್ಗೆ ಹೆಚ್ಚು ಯೋಚಿಸಿ.

–ಫ್ರಾನ್ಸಿಸ್ ಬೇಕನ್

★ ಪಾಪವನ್ನು ತಿರಸ್ಕರಿಸು, ಪಾಪಿಯನ್ನಲ್ಲ.

–ಟಿ.ಪಿ.ಕೈಲಾಸಂ

★ ಕ್ರೋಧದ ಕಾರಣದಿಂದ ನೀವು ದುರ್ಬಲರಾಗುತ್ತೀರಿ, ಕ್ಷೀಣರಾಗುತ್ತೀರಿ. ಕ್ರೋಧ ಸ್ವಯಂಚಾಲಕನನ್ನೇ ಘಾಸಿಕೊಳ್ಳುವಂಥದು.

–ವಿನೋಬಾ ಭಾವೆ

★ ಬೇರೆಯವರ ಅವಗುಣ, ದೋಷಗಳನ್ನು ನೋಡುವ ಅಭ್ಯಾಸವನ್ನು ನೀನು ಬೆಳೆಸಿಕೊಂಡರೆ ದೇವರ ಸಾಕ್ಷಾತ್ಕಾರ ಗಗನ ಕುಸುಮವಾಗುತ್ತದೆ.

–ಸ್ವಾಮಿ ರಾಮತೀರ್ಥರು

★ ಸವಾಲುಗಳನ್ನು ಸ್ವಾಗತಿಸಿ, ಜಾಣತನದಿಂದ ಕಲಿಯಲು ಮತ್ತು ಬೆಳೆಯಲು ಪ್ರತಿಯೊಂದು ಸನ್ನಿವೇಶದಲ್ಲೂ ಅವಕಾಶಕ್ಕಾಗಿ ಎದುರು ನೋಡುತ್ತಿರಿ.

–ಬ್ರಿಯಾನ್ ಟ್ರೇಸಿ

★ ಆರಂಭದಲ್ಲಿ ಬಹಳಷ್ಟು ಕೆಲಸಗಳು ತುಂಬ ಕಷ್ಟ ಎನಿಸಬಹುದು. ಅದನ್ನು ಮಾಡುತ್ತಾ ಹೋದರೆ ಸುಲಭ ಅನ್ನಿಸುವುದು.

–ಸ್ಯಾಮುಯೆಲ್ ಜಾನ್ಸನ್

★ ಮಹಿಳೆ ಮೇಲೆ ಅತ್ಯಾಚಾರ ಮಾಡಿದರೆ ಅದು ಒಬ್ಬ ಮಾಡಿದ ಅಪರಾಧವಾಗುತ್ತದೆ. ಅದಕ್ಕೆ ಆತನನ್ನು ಶಿಕ್ಷಿಸಿದರೆ ಆ ದುಷ್ಕೃತ್ಯ ಪ್ರಕರಣ ಮುಗಿಯುತ್ತದೆ. ಆದರೆ ಭೂಗಳ್ಳತನ ಸೂರ್ಯ ಚಂದ್ರ ಇರುವವರೆಗೆ ನಡೆಯುವ ಕಳವು.

–ಕೋ.ಚೆನ್ನಬಸಪ್ಪ

★ ನಿನ್ನ ಮನೆಯ ಮೆಟ್ಟಿಲು ಕೊಳಕಾಗಿದ್ದರೂ ನೀನು ಬೇರೆಯವರ ಮನೆಯ ಛಾವಣಿ ಕೊಳಕಾಗಿದೆ ಎಂದು ಟೀಕಿಸುವುದರಲ್ಲಿ ಏನು ಅರ್ಥವಿದೆ?

–ಕನ್‌ಫ್ಯೂಷಿಯಸ್

★ ಪ್ರೀತಿಯಿಂದ ಸುಳ್ಳು ಹೇಳುವ ಗೆಳೆಯರಿಗಿಂತ ಕಠೋರವಾದ ಸತ್ಯವನ್ನು ಹೇಳುವ ಗೆಳೆಯರನ್ನು ನಂಬಬಹುದು.

–ರಾಬರ್ಟ್ ಬ್ರಾಲ್ಟ್

★ ಮನುಷ್ಯರ ನಡುವೆ ಸೌಹಾರ್ದತೆ ಒಳ್ಳೆಯದು. ಇಲ್ಲದಿದ್ದರೆ ಜೀವಕ್ಕೆ ನೆಮ್ಮದಿ ಎಲ್ಲಿದೆ?

–ಆಲ್ಬರ್ಟ್ ಕಾಮು